ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Tuesday, 25th July 1972/Shravana 3, 1894 S. E.

The House met in the Assembly Chamber, Vidhana Soudha, at One of the Clock.

MADAM SPEAKER—(SMT. K. S. NAGARATHNAMMA) in the Chair.

STARRED QUESTIONS

(to which Oral Answers were given)

CO-OPERATIVE SOCIETIES

42. SRI S. KARIYAPPA (Kanakapura).—

Will the Minister for Co-operation be pleased to state.—

(*a*) the total number of—(1) Service Co-operative Societies, (2) Industrial Co-operative Societies and (3) Milk Co-operative Societies existing in the Bangalore District (taluk wise information may be furnished) ;

(*b*) the names of those societies—

(1) which are not working satisfactor ly :

(2) which have defalcated or misappropriated society funds ;

(3) the action taken against those societies which have either defalcated or misappropriated society funds ;

SRI A. SHANKARA ALVA.—(Minister for Co-operation).—

(*a*) The total number of existing sccieties in Bangalore District Taluk wise) is as indicated below.—

	Bangalore I Circle	Bangalore North	Bangalore South	Anekal	Dodda-ballapur	Nelaman-gala
1	2	3	4	5	6	7
(1) Service Co-operative Societies.	...	45	49	40	55	61
(2) Industrial Co-operative Societies.	55	26	20	19	14	15
(3) Milk Co-operative Societies	2	18	31	30	20	24

	Hoskote	Devanahalli	Ramanagara	Kanakapur	Channapatna	Magadi	Total
	8	9	10	11	12	13	14
(1) Service Co-operative Societies.	50	37	30	64	42	66	544
(2) Industrial Co-operative Societies.	9	16	17	24	16	11	242
(3) Milk Co-operative Societies.	17	12	13	32	14	19	232
							1,018

(*b*) (1) and (2) Statement I placed on the Table of the House. [Copies p'aced in the Mysore Legislature library *vide* Number 6 dated 25th July 1972.]

(3) Statement II placed on the Table of the House [Copies placed in the Mysore Legislatare library *vide* Number 6 dated 25th July 1972.]

ಶ್ರೀ ಎಸ್. ಕರಿಯಪ್ಪ.—ತಾವು ಒದಗಿಸಿರತಕ್ಕಂಥ ಪಟ್ಟಿಯನ್ನು ನೋಡಿದರೆ ೧೨೦ ಹಾಲಿನ ಸಹಕಾರಿ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ೧೨೪ ಕೈಗಾರಿಕಾ ಸಹಕಾರಿ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ೧೦೮ ಸೇವಾ ಸಹಕಾರಿ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಗೊತ್ತಾಗುತ್ತದೆ. ಇದು ತಮಗೆ ಸಮರ್ಪಕವಾಗಿ ಕಾಣುತ್ತದೆಯೇ ?

† ಶ್ರೀ ಎ. ಶಂಕರ ಆಳ್ವ.—ಯಾವುದು ಸಮರ್ಪಕವಾಗಿ ನಡೆಯುವುದಿಲ್ಲ ಅವನ್ನು ತನಿಖೆ ಮಾಡುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಕ್ರಿಮಿನಲ್ ಕೇಸ್ ಮಾಡುವದಕ್ಕೆ, ಕೆಲವು ಸಂದರ್ಭಗಳಲ್ಲಿ ಆರ್ಬಿಟ್ರೇಷನ್ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಎಸ್. ಕರಿಯಪ್ಪ.—ಇಂತಹ ಪರಿಸ್ಥಿತಿ ಎಷ್ಟು ಕಾಲದಿಂದ ನಡೆದುಕೊಂಡು ಬಂದಿದೆ ?

ಶ್ರೀ ಎ. ಶಂಕರ ಆಳ್ವ.—ಅದನ್ನು ಹೇಳುವುದು ಕಷ್ಟ, ಇಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ ಯಾವ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅವುಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಕರಿಯಪ್ಪ.—ಈಗ ಹಾಕಿರತಕ್ಕಂಥ ಕೇಸ್‌ಗಳ ಪೈಕಿ ೩೫ಕೇಸ್‌ಗಳಲ್ಲಿ ಮಾತ್ರ ಕನ್‌ವಿಕ್ಷನ್ ಆಗಿದೆ. ಇನ್ನು ಉಳಿದ ಕೇಸ್‌ಗಳು ಹೊರಟು ಹೋಗಿವೆ. ಈ ಕೇಸ್‌ಗಳ ಪೈಕಿ ಎಷ್ಟು ಕೇಸ್‌ಗಳು ಲಿಮಿಟೇಷನ್ ಪಾಯಿಂಟ್‌ನಲ್ಲಿ ವಜಾ ಆಗಿವೆ ?

SRI A. SHANKARA ALVA.—The number of cases before the court is 19. Out of that, number of convictions is 9, acquittals 8, otherwise disposed of 2, pending trial before the court 44 and under investigation 29.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಬೆಂಗಳೂರಿನ ೬೦ ಮೈಲಿ ಸುತ್ತಳತೆಯಲ್ಲಿ ಬೆಂಗಳೂರು ಡೈರಿಗೆ ಹಾಲನ್ನು ಸರಬರಾಜು ಮಾಡುವ ಪ್ರಯುಕ್ತ ಬೆಂಗಳೂರು ಡೈರಿಯವರು ಪ್ರತಿ ಪಂಚಾಯಿತಿಯವರಿಗೂ ಅಂದರೆ ಸೊಸೈಟಿ ಪ್ರಾರಂಭ ಮಾಡುವವರಿಗೆ ಬಾವಿ ತೋಡುವುದಕ್ಕೆ ೧೦ ಸಾವಿರ ರೂಪಾಯಿಗಳನ್ನು, ಫಾಡರ್ ಡೆವಲಪ್‌ಮೆಂಟ್‌ಗೆ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಸೊಸೈಟಿಗಳವರು ಬಾವಿ ತೋಡಿದ್ದಾರೆ ಮತ್ತು ಎಷ್ಟು ಜನರು ಹುಲ್ಲು ಬೆಳೆಯುತ್ತಿದ್ದಾರೆ?

ಶ್ರೀ ಎ. ಶಂಕರಆಳ್ವ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಹಣದ ದುರುಪಯೋಗದ ಬಗ್ಗೆ ಕ್ರಿಮಿನಲ್ ಕೇಸ್ ಹಾಕುತ್ತೀರಿ, ಕೋರ್ಟಿನಲ್ಲಿ ಕೇಸ್ ವಜಾ ಆದರೆ ಹಣವನ್ನು ಯಾರಿಂದ ವಸೂಲಿ ಮಾಡುತ್ತೀರಿ ?

ಶ್ರೀ ಎ. ಶಂಕರ ಆಳ್ವ.—ಯಾರು ದುರುಪಯೋಗ ಮಾಡಿರುತ್ತಾರೋ, ಅವರಿಂದ ವಸೂಲಿ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಕೋರ್ಟಿನಲ್ಲಿ ನಿರಪರಾಧಿ ಎಂದು ತೀರ್ಮಾನವಾದರೆ ಯಾರಿಂದ ವಸೂಲಿ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಕೋರ್ಟಿನಲ್ಲಿ ನಿರಪರಾಧಿ ಎಂದು ತೀರ್ಮಾನವಾದರೆ, ನಂತರ ಆರ್ಬಿಟ್ರೇಷನ್ ಮಾಡಿ ವಸೂಲಿ ಮಾಡುತ್ತೇವೆ.

ಶ್ರೀ ಡಿ. ಹಲಗೇಗೌಡ —ಕೋರ್ಟಿನಲ್ಲಿ ಕೇಸ್ ಜಾಗ್ರತೆ ತೀರ್ಮಾನವಾಗದಿದ್ದರೆ ಹಣವನ್ನು ವಸೂಲಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಶಂಕರ ಆಳ್ವ.—ಕೋರ್ಟಿನಲ್ಲಿ ಕೇಸ್ ಇದ್ದಾಗ ಆರ್ಬಿಟ್ರೇಷನ್ ಮೂಲಕ ಹಣ ವಸೂಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಕರಿಯಪ್ಪ —ಒಟ್ಟು ೧೦೧೮ ಸೊಸೈಟಿಗಳ ಪೈಕಿ ೩೫೦ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವಾದ್ದರಿಂದ, ಸೊಸೈಟಿಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ ಎಂದು ತಾವು ಹೇಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಹಾಗೆ ನಾನು ಹೇಳುವುದಿಲ್ಲ.

Madam Speaker : Question No. 238 and 437 may be taken up together.

Asterisks indicate that remarks or speeches have not been revised by the member cancerned.